'ನಾನು ಹೇಳಿದ್ನಲ್ಲ ಸೇತುವೆ... ಶರಾವತಿ ಬ್ಯಾಕ್‌ವಾಟರ್ರು... ಸಬ್‌ಸ್ಟಾಂಡರ್ಡ್ ವರ್ಕ್ ಮಾಡಿದಿರೇನ್ರೀ ಅದುನ್ನ... ಮುಂದಿನ ಬುಧವಾರ ಇನ್‌ಸ್ಪೆಕ್ಷನ್‌ಗೆ ಬರ್ತಿದೀನಿ... ಅಷ್ಟರಲ್ಲಿ ಎಲ್ಲ ರೆಕ್ಟಿಫೈ ಮಾಡಿರ್ಬೇಕು...' ಎಂದು ಹೇಳಿ ಫೋನನ್ನು ಕ್ರೆಡೆಲ್‌ಗೆ ದಡಕ್ಕೆಂದು ಕುಕ್ಕಿ, 'ಆಯ್ತು ಹೋಗಿ, ನಾನು ಬಂದು ನೋಡ್ತೀನಿ...' ಎಂದು ತಲೆತಗ್ಗಿಸಿ ಮತ್ತೆ ಫೈಲುಗಳಲ್ಲಿ ಮುಳುಗಿದರು.

ಆ ಬುಧವಾರ ಎಂಬುದು ಬಂದೇಬಿಟ್ಟಿತು. ಶಿವಮೊಗ್ಗದ ಸರ್ಕಿಟ್ ಹೌಸ್‌ನಲ್ಲಿ ಹಿಂದಿನ ರಾತ್ರಿಯೇ ಬಂದು ಉಳಿದುಕೊಂಡಿದ್ದ ಸಾಹೇಬರು ಬೆಳಗ್ಗೆ ಒಂಬತ್ತು ಗಂಟೆಗೆಲ್ಲ ತಮ್ಮ ಅಧೀನ ಅಧಿಕಾರಿಗಳ ಜೊತೆಗೆ ಸೇತುವೆ ಬಳಿಗೆ ಬಂದೇಬಿಟ್ಟರು.

ಸೇತುವೆ ಆರಂಭಕ್ಕೂ ಮೊದಲೇ ಊರಿಗೆ ಊರೇ ಅಲ್ಲಿ ಸೇರಿಬಿಟ್ಟಿತ್ತು... 'ಒಹ್, ನಮ್ಮವರು ಏನೋ ಎಡವಟ್ಟು ಮಾಡಿದಾರೆ, ಅದಕ್ಕೇ ಘೇರಾವ್ ಮಾಡೋಕ್ಕೆ ಎಲ್ಲ ಸೇರಿದಂಗಿದೆ...' ಎಂದು ಅನುಮಾನಗೊಂಡು, ಶಂಕರಪ್ಪನಿಗೆ, 'ಏನ್ರೀ ಇದೆಲ್ಲ?...' ಎಂದರು. ಆತನೂ, 'ನನಗೂ ಗೊತ್ತಾಗ್ತಿಲ್ಲ ಸರ್... ಪೊಲೀಸ್‌ಗೂ ಇನ್‌ಫಾರ್ಮ್ ಮಾಡಿಲ್ಲ...' ಎಂದು ಆತಂಕದಿಂದ ತಡಬಡಾಯಿಸಲಾರಂಭಿಸಿದ.

ಕಾರಿನಿಂದ ಇಳಿಯಲೋ ಬೇಡವೋ ಎಂದು ಇಳಿಯುತ್ತಿದ್ದಂತೆಯೇ ದೊಡ್ಡದೊಂದು ಹಾರ ಇವರ ಕೊರಳಿಗೇರಿತು. ಅತ್ಯಾಶ್ಚರ್ಯದಿಂದ ನೋಡುತ್ತಿದ್ದಂತೆಯೇ ಯಾರೋ, 'ಗೋಪಾಲಕೃಷ್ಣ ಸಾಹೇಬರಿಗೇ...' ಎನ್ನುತ್ತಿದ್ದಂತೆಯೇ ದೊಡ್ಡದೊಂದು 'ಜೈ'ಕಾರ ಹೊರಹೊಮ್ಮಿತು. ಪೈಲ್ವಾನನಂತಿದ್ದ ವ್ಯಕ್ತಿ ಮುಂದಿನಿಂದ ಬಾಗಿ ಕಾಲುಗಳೆರಡನ್ನೂ ಬಾಚಿ ಮೇಲಕ್ಕೆತ್ತಿದ. ಇಳಿಸುವ ಮುನ್ನವೇ ಹಿಂದಿನಿಂದ ಇನ್ನೊಬ್ಬಾತ ಕಾಲ ಸಂದಿ ತಲೆತೂರಿಸಿ ಅನಾಮತ್ತು ಹೆಗಲ ಮೇಲೆ ಏರಿಸಿಕೊಂಡುಬಿಟ್ಟ. ಜೈಕಾರಗಳಂತೂ ಪುನರಾವರ್ತನೆಗೊಳ್ಳುತ್ತ ಮುಗಿಲು ಮುಟ್ಟಲಾರಂಭಿಸಿದ್ದವು.. ಭಾಜಭಜಂತ್ರಿಗಳ ಸದ್ದು ಕಿವಿಗಪ್ಪಳಿಸುತ್ತಿತ್ತು. ಮುತ್ತೈದೆಯರು ಆರತಿ ಬೆಳಗಿ, ದೃಷ್ಟಿ ನಿವಾಳಿಸಿದರು. ಪೂರ್ಣಕುಂಭ ಹೊತ್ತ ಹೆಂಗಳೆಯರು ಮುಂದೆ ಮುಂದೆ ಹೋಗುತ್ತ, ಇವರನ್ನು ಹೊತ್ತ ಯುವಕರು ಜೈಕಾರ ಕೂಗುತ್ತ ಹಿಂದೆ ಹಿಂದೆ ಊರಿನತ್ತ ಸಾಗುತ್ತಿರುವಾಗ, ನಿಜವಾದ ಅರ್ಥದಲ್ಲಿ ಸೇತುವೆ ಉದ್ಘಾಟನೆಯಾಗಿಹೋಯಿತು...

ಈ ಮಧ್ಯೆ 'ರ್‍ರೀ... ಬೇಡ... ಬಿಡ್ರೀ... ಇಳಿಸ್ರೀ...' ಎಂಬ ಗೋಪಾಲಕೃಷ್ಣ ಅವರ ಯಾವ ಮಾತುಗಳೂ ಯಾರ ಕಿವಿಗೂ ಬೀಳುತ್ತಲೇ ಇರಲಿಲ್ಲ.

ಆದರೆ ಇಂಥದೊಂದು ಸುದ್ದಿ ಮಾತ್ರ ಶಾಸಕರ ಕಿವಿಗೆ ಬಿದ್ದು ಕಾದ ಸೀಸವನ್ನು ಸುರಿದಂತಾಯಿತು.

## ಕಂನಾಡಿಗಾ ನಾರಾಯಣ

ಶಿವಮೊಗ್ಗೆಯ ಸೆರಗಿನ ಗಾಡಿಕೊಪ್ಪದವರು. 'ಮಂಡಲ', 'ಕ್ಷುದ್ರ ನಕ್ಷತ್ರದ ಕಪ್ಪು ರಂಧ್ರ', 'ಹಸಿರು ಕಣ್ಣಿನ ಹುಡುಗಿ', 'ನರವಿಂಧ್ಯ', 'ತಲ್ಲಣದ ಆ ಕ್ಷಣ...', 'ಜೀ ಗಾಂಧಿ...', 'ಇಹದ ಪರಿಮಳ' ಎಂಬ ಕಥಾಸಂಕಲನಗಳನ್ನು, 'ಕಾಂಡ', 'ಆಕಾಶ', 'ಭೂಮಿ', 'ದ್ವಾಪರ' ಎಂಬ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. ಕತೆ ಮತ್ತು ಕಾದಂಬರಿಗಳು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ. ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಆಡಿಟ್ ಆಫೀಸರ್ ಆಗಿರುವ ನಾರಾಯಣ ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.